


ಗೆಲುವಿನ ಖುಷಿ... ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಸಂಭ್ರಮದಲ್ಲಿ ಆಸ್ಟ್ರೇಲಿಯಾ ತಂಡ

# ಟೆಸ್ಟ್‌ನಲ್ಲಿ ಫೇಲಾದ ಐಪಿಎಲ್ ವೀರರು



ಬಾರ್ಡರ್–ಗವಾಸ್ಕರ್ ಟೂರ್ನಿಯಲ್ಲಿ ಆಸ್ಟ್ರೇಲಿಯಾವನ್ನು ಬಗ್ಗುಬಡಿದ ಭಾರತ ‘ಫೈನಲ್ ಟೆಸ್ಟ್’ನಲ್ಲಿ ಅದೇ ದೇಶದ ವಿರುದ್ಧ ಸೋತಿದ್ದು ಯಾಕೆ? ಬಿಸಿಸಿಐ ಕ್ರಿಕೆಟಿಗರು ‘ಐಪಿಎಲ್’ ಹೊರತುಪಡಿಸಿಯೂ ಕ್ರಿಕೆಟ್ ಇದೆ ಎನ್ನುವುದನ್ನು ಮರೆತಿರುವಂತಿದೆ.

■ ಪ್ರಮೋದ

ಭಾರತ ಕ್ರಿಕೆಟ್ ತಂಡಕ್ಕೆ ಜೂನ್ ತಿಂಗಳು ಸದಾಕಾಲ ಸವಿನೆನಪಿನಲ್ಲಿ ಉಳಿಯುವಂತಹದ್ದು. ‘ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್’ (ಐಸಿಸಿ) ಆಯೋಜಿಸುವ ಪ್ರತಿಷ್ಠಿತ ಟೂರ್ನಿಗಳಲ್ಲಿ ಒಂದಾದ ಏಕದಿನ ವಿಶ್ವಕಪ್‌ನಲ್ಲಿ ಭಾರತ ಮೊಟ್ಟಮೊದಲ ಟ್ರೋಫಿ ಎತ್ತಿ ಹಿಡಿದಿದ್ದು 1983ರ ಜೂನ್‌ನಲ್ಲಿ. ಐಸಿಸಿಯ ಇನ್ನೊಂದು ಪ್ರಮುಖ ಟೂರ್ನಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ಚೊಚ್ಚಲ ಬಾರಿಗೆ ಚಾಂಪಿಯನ್ ಆಗಿದ್ದು 2013ರ ಜೂನ್‌ನಲ್ಲಿ. ಇದು ಭಾರತ ಗೆದ್ದ ಕೊನೆಯ ಐಸಿಸಿ ಟ್ರೋಫಿ ಕೂಡ.

ಭಾರತ ಗೆದ್ದುಕೊಂಡ ಒಟ್ಟು ಐದು ‘ಐಸಿಸಿ ಟ್ರೋಫಿ’ಗಳಲ್ಲಿ ಎರಡು ಜೂನ್‌ನಲ್ಲಿಯೇ ಬಂದರೆ, ಇನ್ನುಳಿದ ಮೂರು ಟ್ರೋಫಿಗಳು ಜೂನ್ ಆಸುಪಾಸಿನಲ್ಲಿಯೇ ಒಲಿದಿವೆ. ಇಂಥ ಜೂನ್‌ನಲ್ಲಿಯೇ ಇತಿಹಾಸ ಬರೆಯುವ ಎರಡು ಭವ್ಯ ಅವಕಾಶವನ್ನು ಭಾರತ ಕಳೆದುಕೊಂಡಿದೆ. ಈ ಸಲದ ‘ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್’ (ಡಬ್ಲ್ಯುಟಿಸಿ) ಆರಂಭದಿಂದಲೇ ಉತ್ತಮ ಪ್ರದರ್ಶನದ ಮೂಲಕ ಗಮನ ಸೆಳೆದಿದ್ದ ಭಾರತ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಮುಗ್ಗರಿಸಿತು. 2019ರಿಂದ 2021ರ ಅವಧಿಯಲ್ಲಿ ಮೊದಲ ಬಾರಿಗೆ ನಡೆದಿದ್ದ ಡಬ್ಲ್ಯುಟಿಸಿಯಲ್ಲಿ ಭಾರತ ತಂಡ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಸೋಲು ಕಂಡಿತ್ತು. ಡಬ್ಲ್ಯುಟಿಸಿಯಲ್ಲಿ ಎರಡು ಬಾರಿ ರನ್ನರ್ಸ್ ಅಪ್ ಆದ ಏಕೈಕ ತಂಡವಾದ ಭಾರತದ